# ನಿರ್ದೇಶನದ ಸಖ್ಯ; ನಟನೆಯೂ ಮುಖ್ಯ



**ನಟನೆ ಮತ್ತು ನಿರ್ದೇಶನದ ದ್ವಿಪಾತ್ರವನ್ನು ನಿರ್ವಹಿಸುತ್ತಿರುವ ರಾಘು ಶಿವಮೊಗ್ಗ ಅವರು ಈ ಎರಡೂ ಪಾತ್ರಗಳಲ್ಲಿಯೂ ಜನರಿಗೆ ನೆಚ್ಚಾಗುವ ಕನಸನ್ನು ಹೊಂದಿದ್ದಾರೆ.**

**■ ಪದ್ಮನಾಭ ಭಟ್**

‘ಇದು ನನ್ನ ನಟನಾಜೀವನದ ಎರಡನೇ ಇನಿಂಗ್ಸ್’ ಎಂದು ಹೇಳಿ ನಕ್ಕರು ರಾಘು ಶಿವಮೊಗ್ಗ.

‘ಚೌಕಾಬಾರಾ’ ಕಿರುಚಿತ್ರ, ‘ಚೂರಿಕಟ್ಟೆ’ ಸಿನಿಮಾ ಮೂಲಕ ಗಾಂಧಿನಗರದಲ್ಲಿ ನಿರ್ದೇಶಕರಾಗಿಯೇ ಗುರ್ತಿಸಿಕೊಂಡವರು. ಆದರೆ ಅವರು ಬಣ್ಣದ ಬದುಕಿಗೆ ಬಂದಿದ್ದು ನಟನಾಗುವ ಕನಸು ಹೊತ್ತು.

‘2004ರಲ್ಲಿ ನಾನು ನೀನಾಸಮ್‌ಗೆ ಹೋಗಿದ್ದು ನಟನಾಗುವ ಆಸೆ ಹೊತ್ತುಕೊಂಡೇ. ಅಲ್ಲಿ ಒಂದು ವರ್ಷದ ಕೋರ್ಸ್ ಅವಧಿಯಲ್ಲಿ, ನಂತರ ‘ನೀನಾಸಮ್ ತಿರುಗಾಟ’ದ ನಾಟಕಗಳಲ್ಲಿ ನನಗೆ ಒಳ್ಳೆಯ ಪಾತ್ರಗಳೇ ಸಿಕ್ಕವು. 2006ರಲ್ಲಿ ಬೆಂಗಳೂರಿಗೆ ಬಂದಾಗ ಪ್ರಕಾಶ್ ಬೆಳವಾಡಿ ಅವರ ಸೆಂಟರ್ ಫಾರ್ ಫಿಲಂ ಆ್ಯಂಡ್ ಡ್ರಾಮಾ’ದಲ್ಲಿ ತಾಂತ್ರಿಕ ತಂಡದಲ್ಲಿ ಸೇರಿಕೊಂಡೆ. ಅವರ ನಾಟಕಗಳಲ್ಲಿ ನಟಿಸತೊಡಗಿದೆ. ಅಲ್ಲಿ ನನ್ನ ನೋಡಿದ ಕೆ.ಎಂ. ಚೈತನ್ಯ ಅವರು ತಮ್ಮ ‘ಮುಗಿಲು’ ಧಾರಾವಾಹಿಯಲ್ಲಿ ಒಂದು ಪಾತ್ರ ಕೊಟ್ಟರು. ಅದಕ್ಕೂ ಮೊದಲು ಬೆಳವಾಡಿ ಅವರೇ ‘ನೂರೆಂಟು ಸುಳ್ಳು’ಎಂಬ ಧಾರಾವಾಹಿಯಲ್ಲಿ ಅವಕಾಶ ಕೊಟ್ಟಿದ್ದರು. ಆ ಧಾರಾವಾಹಿ ಟೆಲಿಕಾಸ್ಟ್ ಆಗಲೇ ಇಲ್ಲ. ನಂತರ 2012ರವರೆಗೂ ನಾನು ನಾಟಕ, ಧಾರಾವಾಹಿಗಳಲ್ಲಿ ಅಭಿನಯಿಸಿಕೊಂಡೇ ಇದ್ದೆ. ‘ಇಲ್ಲಿರುವುದು ಸುಮ್ಮನೆ’, ‘ಮುಕ್ತ ಮುಕ್ತ’, ‘ಮಂಜು ಮುಸುಕಿದ ಹಾದಿ’, ‘ಅರಸಿ’ ಹೀಗೆ ಹಲವು ಧಾರಾವಾಹಿಗಳಲ್ಲಿ ನಟಿಸಿದೆ. ಜೊತೆಗೆ ಪ್ರಕಾಶ್ ಬೆಳವಾಡಿ ಅವರ ಇನ್‌ಸ್ಟಿಟ್ಯೂಟ್‌ನಲ್ಲಿಯೂ ಕೆಲಸ ಮಾಡುತ್ತಿದ್ದೆ. ಸಂಸ್ಥೆಯಲ್ಲಿಯೇ ಇದ್ದಿದ್ದರಿಂದ ಅಲ್ಲಿ ನಡೆಯುವ ವಾರಾಂತ್ಯದ ಫಿಲ್ಮ್ ಮೇಕಿಂಗ್ ಕೋರ್ಸ್‌ನ ಪ್ರತಿಯೊಂದು ಕ್ಲಾಸ್ ಕೂಡ ನೋಡಬೇಕಾಗಿತ್ತು. ಅದರಲ್ಲಿ ಗಂಭೀರವಾಗಿಯೇ ಭಾಗವಹಿಸುತ್ತಿದ್ದೆ. ಸಿನಿಮಾ ನಿರ್ಮಾಣದ ಬಗ್ಗೆ ಕಲಿತುಕೊಂಡಿದ್ದು ಅಲ್ಲಿಯೇ. ಜೊತೆಗೆ ಅಲ್ಲಿಯೇ ಪ್ರತಿತಿಂಗಳು ಕನಿಷ್ಠ ಇಪ್ಪತ್ತು ಉತ್ತಮ ಸಿನಿಮಾಗಳನ್ನು ಪ್ರದರ್ಶಿಸುತ್ತಿದ್ದರು. ಅವುಗಳನ್ನು ನೋಡುತ್ತಿದ್ದೆ. ನಿರ್ದೇಶನದ ರುಚಿ ಹತ್ತಿದ್ದು ಅಲ್ಲಿಯೇ’ ಎಂದು ನಟನೆಯಿಂದ ನಿರ್ದೇಶನಕ್ಕೆ ಹೊರಳಿಕೊಂಡಿದ್ದನ್ನು ವಿವರಿಸುತ್ತಾರೆ ರಾಘು.

2010ರಿಂದ ನಿರ್ದೇಶಕನ ಟೋಪಿ ಧರಿಸಿದ ರಾಘು ಮೊದಲು ನಿರ್ದೇಶಿಸಿದ್ದು ಒಂದು ಸಾಕ್ಷ್ಯಚಿತ್ರವನ್ನು. ನಂತರ ವೈಕಂ ಮಹಮ್ಮದ್ ಬಷೀರ್ ಅವರ ಕಥೆಯನ್ನು ಆಧರಿಸಿದ ಕಿರುಚಿತ್ರ ಮಾಡಿದರು. ಬಿ. ಸುರೇಶ್ ಜೊತೆಗೆ ಹಲವು ಟೆಲಿಫಿಲಂಗಳನ್ನು ಮಾಡಿ ಅನುಭವ ಪಡೆದುಕೊಂಡರು. ಅಲ್ಲಿಂದಲೇ ತನ್ನೊಳಗಿನ ನಿರ್ದೇಶಕನಿಗೆ ಸಾಣೆ ಹಿಡಿಯುತ್ತ ಬಂದ ರಾಘು ಅವರನ್ನು ಗಾಂಧಿನಗರ